ಶ್ರೀ ಪಿ. ಜಿ. ಆರ್. ಸಿಂಧ್ಯಾ (ಸಾರಿಗೆ ಮತ್ತು ಪಸಶಿ ರಾಜ್ಯಮಂತ್ರಿಗಳು).—

ಅ) ಇಲ್ಲ.

ಆ)
ಇ)
ಈ) } ಮೇಲಿನ ಉತ್ತರದಿಂದ ಈ ಪ್ರಶ್ನೆಗಳು ಉದ್ಭವಿಸುವುದಿಲ್ಲ.

ಬಳ್ಳಾರಿಯ ನಗರಸಭೆಯ ಕಿನೇ ವರ್ಗದ ನೌಕರರ ಜೇಷ್ಠತಾ ಪಟ್ಟಿಯನ್ನು ಕಡೆಗಣಿಸಿರುವುದರ ಬಗ್ಗೆ

೧೫೯(೯೬) ಶ್ರೀ ಎಂ. ರಾಮಪ್ಪ (ಬಳ್ಳಾರಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರ ಮತ್ತು ನಗರಾಭಿವೃದ್ಧಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ :—

ಅ) ರಾಯಚೂರು, ಗುಲ್ಬರ್ಗ, ಬೀದರ್ ನಗರ ಸಭೆಯ ಕಿರಿಯ ನೌಕರರರಿಗೆ ಮುಂಬಡ್ತಿ ಕೊಡುವಲ್ಲಿ ಬಳ್ಳಾರಿ ಮತ್ತು ಹೊಸಪೇಟೆ ನಗರಸಭೆಯ ಮೂರನೆಯ ವರ್ಗದ ನೌಕರರ ಜೇಷ್ಠತಾ ಪಟ್ಟಿಯನ್ನು ಕಡೆಗಣಿಸಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ಲೋಪದೋಷಗಳನ್ನು ಸರಿಪಡಿಸುವುದಕ್ಕೆ ಸರಕಾರವು ಯಾವ ರೀತಿಯ ಕ್ರಮವನ್ನು ತೆಗೆದುಕೊಳ್ಳುವುದು ಮತ್ತು ಯಾವಾಗ ?

ಶ್ರೀ ಎ. ಲಕ್ಷ್ಮಿಸಾಗರ್. —(ಕಾನೂನು ಮತ್ತು ನಗರಾಭಿವೃದ್ಧಿ ಮಂತ್ರಿಗಳು).—

ಅ) ಇಲ್ಲ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆಯು ಉದ್ಭವಿಸುವುದಿಲ್ಲ.

ಕೈಗಾರಿಕೆಗಳಿಗೆ ಅಭಿವೃದ್ಧಿ ಸಾಲಗಳನ್ನು ಕೊಡುವ ಬಗ್ಗೆ

೧೩೦(೫೧) ಶ್ರೀ ಕೆ. ಹೆಚ್. ಪಾಟೀಲ್ (ಗದಗ್).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ :—

ಅ) ಅಭಿವೃದ್ಧಿ ಸಾಲಗಳನ್ನು ಕೈಗಾರಿಕೆಯಲ್ಲಿ ಹಿಂದುಳಿದ ಪ್ರದೇಶಗಳಲ್ಲಿ ಕೊಡುವುದರಲ್ಲಿ ನಿರ್ದಿಷ್ಟವಾದ ದೋರಣೆಯೇನು ? ದೋರಣೆಯ ಪ್ರಕಾರ ಈ ತರಹದ ಸಾಲವನ್ನು ಕೊಡುವುದರಲ್ಲಿ ಗರಿಷ್ಟ ಸಾಲವೆಷ್ಟು ?

ಆ) ಕೊಡಬೇಕಾದ ಮಾರಾಟ ತೆರಿಗೆ ಬದಲು ಸಾಲ ಕೇಳಿರುವ ಯಾವುದಾದರೂ ಪ್ರಸ್ತಾಪಗಳು ಸರ್ಕಾರದ ಮುಂದೆ ಹಿಂದುಳಿದ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವುದಕ್ಕಾಗಿ ಬಂದಿದ್ದು, ಬಾಕಿ ಉಳಿದಿದೆಯೇ ? ಹಾಗಿದ್ದಲ್ಲಿ ಅವುಗಳು ಈಗ ಯಾವ ಹಂತದಲ್ಲಿವೆ ?

ಇ) ಅವುಗಳು ಸರ್ಕಾರೀ ಆದೇಶದ ಪ್ರಕಾರ ಇರುವಾಗ ಅವುಗಳನ್ನು ಇತ್ಯರ್ಥಪಡಿಸುವಲ್ಲಿ ವಿಳಂಬವಾಗುವುದಕ್ಕೆ ಕಾರಣಗಳೇನು ?

ಈ) ಪ್ರತಿ ತಾಲ್ಲೂಕಿನಲ್ಲಿಯೂ ಕೈಗಾರಿಕಾ ಪಸಾಹತು ಸ್ಥಾಪನೆ ಮಾಡುವುದರಲ್ಲಿ ಸಾಧನೆಯೇನು ? ಮತ್ತು ವಿಳಂಬಗಳಿಗೆ ಕಾರಣಗಳೇನು ?

ಉ) ೧೯೮೪-೮೫ರಲ್ಲಿ ಹಾಗೂ ೧೯೮೫-೮೬ ರಲ್ಲಿ ಪ್ರಾರಂಭಿಸಿರುವ ಕೈಗಾರಿಕೆಗಳ ಸಂಖ್ಯೆಎಷ್ಟು ತಿಂಗಳುವಾರು ಮಾಹಿತಿಯನ್ನು ಒದಗಿಸಬೇಕು ?

ಊ) ಗೊಬ್ಬರದ ಕಾರ್ಖಾನೆಯನ್ನು ಕರ್ನಾಟಕದಲ್ಲಿ ಸ್ಥಾಪಿಸುವಂತೆ ವಿಶೇಷವಾದ ಪ್ರಯತ್ನ ಸರ್ಕಾರ ಮಾಡುತ್ತಿದೆಯೇ ? ಹಾಗಿದ್ದಲ್ಲಿ ಅದನ್ನು ಕಾರವಾರ ಪ್ರದೇಶದಲ್ಲಿ ಸ್ಥಾಪಿಸಲಾಗುವುದೇ ?

ಶ್ರೀ ಜೆ. ಹೆಚ್. ಪಟೀಲ್.—(ಭಾರಿ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳು).—

ಅ) ರಾಜ್ಯದಲ್ಲಿ ಅಭಿವೃದ್ಧಿ ಸಾಲಗಳನ್ನು ಪ್ರೋತ್ಸಾಹ ಮತ್ತು ರಿಯಾಯಿತಿಯನ್ನು ಹೊಸದಾಗಿ ಪುನರಿಕ್ಷತಗೊಳಿಸಿದ ಆಜ್ಞೆಯ ಪ್ರಕಾರ ಕೈಗಾರಿಕೆಗಳಿಗೆ ನೀಡಲಾಗುತ್ತಿದೆ. ತಾವು ಹೂಡಬೇಕಾದ ಬಂಡವಾಳವನ್ನು ಬೇರೆ ಬೇರೆ ಆರ್ಥಿಕ ಸಹಾಯ ನೀಡುವ ಸಂಸ್ಥೆಗಳಿಂದ ಪಡೆದ ನಂತರ ಅಲ್ಲದೆ ಪಡೆಯಬೇಕಾದ ಬಂಡವಾಳದ ಮೇಲಿನ ಸಹಾಯಧನ ಮತ್ತು ಬೇರೆಯ ರೀತಿಯಲ್ಲಿ ಬಂಡವಾಳ ಪಡೆದ ನಂತರ ಕಡಿಮೆ ಬೀಳುವ ಬಂಡವಾಳವನ್ನು ಅಭಿವೃದ್ಧಿ ಸಾಲವಾಗಿ ಕೊಡಲಾಗುತ್ತದೆ. ಬಡ್ಡಿರಹಿತ ಅಭಿವೃದ್ಧಿ ಸಾಲವನ್ನು ಗರಿಷ್ಟವಾಗಿ ಸಣ್ಣ ಕೈಗಾರಿಕೆಗಳಿಗೆ ರೂ. ೫.೫ ಲಕ್ಷ, ಆನ್‌ಸೀಲರಿ ಘಟಕಗಳಿಗೆ ೭.೫ ಲಕ್ಷ, ಮಧ್ಯಮ ಹಾಗೂ ಭಾರಿ ಕೈಗಾರಿಕೆಗಳಿಗೆ ೫೦ ಲಕ್ಷ ರೂಗಳನ್ನು ಕೊಡಲಾಗುತ್ತದೆ. ಕೈಗಾರಿಕಾ ರಹಿತ ಜಿಲ್ಲೆಯಲ್ಲಿ ಗರಿಷ್ಟ ಅಭಿವೃದ್ಧಿ ಸಾಲ ೧ ಕೋಟಿ ರೂಪಾಯಿಗಳು. ಅಭಿವೃದ್ಧಿ ಸಾಲದ ಅರ್ಜಿಗಳನ್ನು ರಾಜ್ಯಮಟ್ಟದ ಸರ್ಕಾರದಿಂದ ರಚಿತವಾದ ಕಮಿಟಿಯಿಂದ ಪರಿಶೀಲಿಸಲಾಗುತ್ತವೆ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಈ) ೫ನೇ ಯೋಜನೆಯ ಕೊನೆಗೆ ೧೨೦೦ ಮಳಿಗೆಗಳನ್ನು ೩೪ ತಾಲ್ಲೂಕುಗಳಲ್ಲಿ ಕಟ್ಟಲಾಗಿದೆ. ಹಿಂದಿನ ೫ ವರ್ಷಗಳಲ್ಲಿ ೧೮೦೦ ಮಳಿಗೆಗಳನ್ನು ಮತ್ತೆ ೩೫ ತಾಲ್ಲೂಕುಗಳಲ್ಲಿ ಕಟ್ಟಲಾಗಿದೆ. ೭ನೇ ಯೋಜನೆಯ ಅವಧಿಯಲ್ಲಿ ೫೩೭೦ ಮಳಿಗೆಗಳನ್ನು ಕಟ್ಟಿಸುವ ಉದ್ದೇಶವಿದೆ.

ಉ) ಪಟ್ಟಿಯನ್ನು ಲಗತ್ತಿಸಲಾಗಿದೆ.

ಊ) ಸದ್ಯಕ್ಕೆ ಸರ್ಕಾರದ ಮುಂದೆ ಯಾವ ಪ್ರಸ್ತಾಪವು ಇರುವುದಿಲ್ಲ.

STATEMENT SHOWING THE INDUSTRIAL UNITS REGISTRED DURING 1984–85 and 1985–86 (upto 31-5-1985)

	Name of the month	No. of units Registered.
I	SMALL SCALE INDUSTRIES	1984–85
	1. April	503
	2. May	935
	3. June	893
	4. July	877
	5. August	885
	6. September	1000
	7. October	881
	8. November	992
	9. December	884
	10. January	1046
	11. February	1190
	12. March	1520
II	LARGE & MEDIUM INDSTRIES	31
		1985-86